# ಪುಲಿಗೆರೆಗೆ ಪಯಣ

ಬೂತುಗನು ಮಣಲೆರನಿಗೆ ಬೆಳ್ವೊಲ ಪ್ರದೇಶದ ಕಾದಿಯೂರನ್ನು ನೀಡಿದ್ದರಿಂದ ಮನಲೆರನ ಕುಟುಂಬ ಪರಿವಾರ ಸಮಸ್ತವೂ ತನ್ನ ವಾಸವನ್ನು ಅಲ್ಲಿಗೆ ಸ್ಥಳಾಂತರಿಸಿತು. ಅಲ್ಲಿಂದ ಮುಂದೆ ಮತ್ತೆ ಮಣಲೆರ ವಂಶದ ಪ್ರಸ್ತಾಪ ಮಳವಳ್ಳಿ, ಮದ್ದೂರು ಪ್ರದೇಶದಲ್ಲಿ ಕಂಡು ಬರುವುದಿಲ್ಲ. ಒಂಬತ್ತನೆಯ ಶತಮಾನದ ಉತ್ತರಾರ್ಧದಿಂದ ಆಚೆಗಿನ, ಕ್ರಿ.ಶ. ೯೫೦ ರ ಅನಂತರದ ಶಾಸನಗಳು, ಈ ಕುಲವನ್ನು ಕುರಿತು ಪ್ರಸ್ತಾಪಿಸುವ ದಾಖಲೆಗಳು ಪುಲಿಗೆರೆ ಮತ್ತು ಬೆಳ್ವೊಲ ಪ್ರದೇಶಕ್ಕೆ ಸೇರಿವೆ. ಸಗರವಂದವರಿಗೆ ಸಂಬಂಧಿಸಿದ ಅನಂತರದ ಮತ್ತು ಹೆಚ್ಚಿನ ಸಂಖ್ಯೆಯ ಶಾಸನಗಳು ಸಿಗುವುದು ಪಶ್ಚಿಮ ಚಾಳುಕ್ಯರ ಅವಧಿಯಲ್ಲಿ. ಮಣಲೆರ ಮನೆತನದವರು ಗಂಗರು, ರಾಷ್ಟ್ರಕೂಟರ ತರುವಾಯ, ಅವರಿಗೆ ತೋರುತ್ತಿದ್ದ ರಾಜನಿಷ್ಠೆಯನ್ನು ಚಾಳುಕ್ಯರಿಗೆ ತೋರಲು ಪ್ರಾರಂಭಿಸಿದ್ದು, ಈ ಹೊಸ ರಾಜಾಶ್ರಯಕ್ಕೆ ಅವರು ಕುದುರಿಕೊಂಡದನ್ನು ದೃಢಪಡಿಸುತ್ತದೆ. ಗಂಗವಂಶ ಮತ್ತು ರಾಷ್ಟ್ರಕೂಟ ರಾಜ್ಯಗಳು ಇತಿಹಾಸದಲ್ಲಿ ವಿಲೀನವಾದ ಮೇಲೆ, ಅದಕ್ಕೆ ಇತಿಶ್ರೀ ಹಾಡುತ್ತ ತನ್ನ ಧ್ವಜವನ್ನು ಹಾರಾಡಿಸಿ ಚಾಳುಕ್ಯ ಸತ್ಯಾಶ್ರಯಕುಲ ತಿಲಕ ತೈಲಪನ ಮತ್ತು ಆತನ ಮಗನ ಆಶ್ರಯದಲ್ಲಿ, ಅಳಿದುಳಿದ ಗಂಗರ, ರಟ್ಟರ ನಿಷ್ಠ ಅಧಿಕಾರಿಗಳೆಲ್ಲ ಸೇರಿಕೊಂಡರು. ಶಂಕರಗಂಡ, ರನ್ನ, ಮಣಲೆರರು–ಇವರಲ್ಲ ಜೈನರಾಗಿದ್ದುದಕ್ಕೆ ಶಾಸನ ಮತ್ತು ಕಾವ್ಯಗಳ ಆಧಾರಗಳಿವೆ.

ಮಣಲೆರರು ತಲೆಬಾಗಿದ ಈ ಹೊಸ ಆಶ್ರಯದಲ್ಲಿ ಮೊದಲನೆಯ ಸಗರ ಕುಲದ ಅಧಿಕಾರಿಯಾಗಿ ಕಾಣಿಸುವುದು ಮಣಲೇರ ಗಾಡಿಗ ಎಂಬ ನಾಳ್ಗಾವುಂಡನೆಂದು ತಿಳಿಯಲಾಗಿತ್ತು. ಆ ಶಾಸನದ ಪಾಠ:

ಪುರಿಗೆಱೆ ಮೂನೂಱುವಂ ಕುಪ್ಪೆಯರಸರಾಳೆ

ಮಣಲೆರ ಗಾಡಿನ ನಾಱ್ಗಾಮುಣ್ಡುಗೆಯ್ಯೆ

ಕರ್ಗ್ಗಾಮುಣ್ಡರ ಕಲ್ಲಮನೂರ್ಗ್ಗಾ ಮುಣ್ಡುಗೆಯ್ಯೆ

(ಮೂನೂ) ಱಱ ಕಳ್ಳವಳ್ಳ ಪೆನ್ದಮನಾಳುತ್ತ

ಮಿಟ್ದಿ ಕುಪ್ಪೆಯರಸರಗ್ಗೆ ಬಿನ್ನಹಂಗೆಯ್ದು

ಸಿಗ್ಗಾಮೆಯ ಕಳ್ಳವಳ್ಳದೆರೆಯೆಂ ಶ್ರೀ ಕಲ್ನೆಱಿತಿ

ಭಟಾರಿಗೆ ಕೊಟ್ಟನ್ [ಎ.ಇ. ೩೫, ೧೦. ಪು. ೮೫–೮೮]

ಅಮೋಘವರ್ಷನ ಸಾಮಂತ ಕುಪ್ಪರಸನು ಪುರಿಗೆಱೆ–೩೦೦, ಮಣಲೆರೆ ಗಾಡಿ ಗನು ಪುರಿಗೆಱೆಯ ನಾಱ್ಗಾಮುಂಡನ, ಕರ್ಗಾಮುಂಡರ ಕಲ್ಲಮನು ಊರ್ಗಾಮಣ್ಡು, ಪೆಂದಮನ್ ಎಂಬಾತ ಕಳ್ಳವಳ್ಳ ತೆರಿಗಾಧಿಕಾರಿ–ಇವರು ಪ್ರಸ್ತಾಪಗೊಂಡಿದ್ದಾರೆ. ಈ ಶಾಸನೋಕ್ತ ಅಮೋಘವರ್ಷನು ರಾಷ್ಟ್ರಕೂಟರ ಕಟ್ಟಕಡೆಯ ನಾಲ್ಕನೆಯ ಅಮೋಘ ವರ್ಷ ಕರ್ಕ (೯೭೨–೭೩) ಎಂಬುದು ಎನ್. ಲಕ್ಷ್ಮೀನಾರಾಯಣರಾವ್ ಅಭಿಪ್ರಾಯ. (ಸೌ.ಇ.ಇ. ೧೧.೨. ಪಿ.ವಿ.). ಆದರೆ ಜಿ. ಎಸ್. ಗಾಯಿ ಈತ ಮೊದಲನೆಯ ಅಮೋಘವರ್ಷ (೮೧೪–೭೮) ಎಂದಿದ್ದಾರೆ (ಎ.ಇ.೩೫, ೧೦ ಪು. ೮೫–೮೮) ಇಲ್ಲಿನ ಕುಪ್ಪೆಯನ್ (ಕುಪ್ಪೆಯರಸರ್, ಕುಪ್ಪೆಯರಸ) ಎಂಬಾತ ಮಂತ್ರವಾಡಿ ವಿಭಾಗದ ಅಧಿಕಾರಿ. ಯಾದವ ವಂಶೋದ್ಭವ ರಣ (ಮೂರ್ಖ) ಧವಳ ಷಟ್ಗುಣಾಳಂಕಾರ ಆಹಾವಾದಿತ್ಯ ಶ್ರೀಮತ್ ಕುಪ್ಪೆಯರಸರ್ ಪುರಿಗೆಱೆ ನಾಡನಾಳುತ್ತಿರೆ ಎಂಬ ಪ್ರಸ್ತಾಪ ಎರಡು ಶಾಸನಗಳಲ್ಲಿದೆ [ಸೌ.ಇ.ಇ. ೧೧–೧, ೨. ೮೬೫. ಮೇವುಂಡಿ (ಧಾನಿ/ಮುಂಡರಗಿ ತಾ): ಅದೇ, ೧೨. ೮೬೭–೬೮. ಸೊರಟೂರು ಧಾಜಿ/ಗದಗ ತಾ)]; ಶಿಗ್ಗಾಂವಿ ಶಾಸನದಲ್ಲೂ ಕುಪ್ಪೆಯರಸನ ಹೆಸರಿದೆ.

ಮಣಲೆರ ಎಂಬುದು ವಂಶ (ಸಗರಕುಲ ಎಂಬ ಹೆಸರು ರಷ್ಟ್ರಕೂಟ ಮತ್ತು ಚಾಳುಕ್ಯರ ಕಾಲದಲ್ಲಿ ಪ್ರಚಲಿತವಾಯಿತು). ಗಾಡಿಗ ಎಂಬುದು ಈ ಮಣಲೆರ ವಂಶದ ವ್ಯಕ್ತಿಯ ಹೆಸರು (ಅಂಕಿತನಾಮ). ಈ ಮಣಲೆರ ಗಾಡಿಗನು. ಪುಲಿಗೆಱೆ ೩೦೦ ರ ನಾಱ್ಗಾಮುಂಡನಾಗಿದ್ದು ಈತನ

ಕಾಲ ಕ್ರಿ.ಶ. ೯೭೨ ಎಂದು ಎನ್. ಲಕ್ಷ್ಮೀನಾರಾಯಣ ರಾವ್, ೮೬೫ ಎಂದು ಜಿ. ಎಸ್. ಗಾಯಿ ಸೂಚಿಸಿದ್ದಾರೆ. [Shiggaon Inscriptions of Amoghavarsha,I. ಎ.ಇ. ೩೫, ೧೦ ಪು. ೮೫–೮೮]. ಗಾಯಿ ಅವರು ಕೊಡುವ ಮಣಲೆರರ ವಂಶವೃಕ್ಷ ಹೀಗಿದೆ: ಮಣಲೆರಗಾಡಿಗ ಸು. ೮೬೫–ಮಣಲೆರ ಕ್ರಿ.ಶ. ೯೪೯–ಮಾರಸಿಂಹI, ಕ್ರಿ.ಶ. ೯೨೭–ಜಯಕೇಸಿಯ ಇಬ್ಬರು ಮಗಂದಿರದ ಇಮ್ಮಡಿ ಜಯಕೇಸಿನ್ (೧೦೬೦, ೧೦೭೪, ೧೦೭೭, ೧೦೮೨) ಮತ್ತು ಇಮ್ಮಡಿ ಮಾರಸಿಂಹರು. ಇಮ್ಮಡಿ ಮಾರಸಿಂಹನ ಮಗ ಇಮ್ಮಡಿ ಇಂದ್ರಕೇಸಿ. ಇಮ್ಮಡಿ ಮಾರಸಿಂಹರು. ಇಮ್ಮಡಿ ಮಾರಸಿಂಹನ ಮಗ ಇಮ್ಮಡಿ ಇಂದ್ರಕೇಸಿ. ಇಮ್ಮಡಿ ಜಯಕೇಸಿಯ ಹಿರಿಯ ಮಗನ ಹೆಸರು ಅಜ್ಞಾತವಾಗಿ ಉಳಿದಿದೆ; ಕಿರಿಯ ಮಗನಾದ ವಜ್ರದಂತನು ಕದಂಬ ಕುಲಜೆಯಾದ ಮಾದಲದೇವಿಯನ್ನು ಮದುವೆ ಯಾಗಿದ್ದನು. ವಜ್ರದಂತ ಮಾದಲದೇವಿಯರ ಮಗನೇ ಮುಮ್ಮಡಿ ಜಯಕೇಸಿ (೧೧೨೮, ೧೧೩೮, ೧೧೪೭, ೧೧೫೩). ಈ ವಂಶಪೀಳಿಗೆಯಲ್ಲಿ ಮರು ಹೊಂದಾಣಿಕೆಯನ್ನು ನಾನು ಈ ಸಂಪ್ರಬಂಧದ ಕಟ್ಟಕಡೆಯಲ್ಲಿ ಕೊಟ್ಟಿದ್ದೇನೆ. ಶಿಗ್ಗಾಂವಿಯ ಅತೇದಿ ಶಾಸನದ ಪ್ರಕಾರ ಮಣಲೇರ ಗಾಡಿದನು ನಾಳ್ಗಾವುಂಡನಾಗಿದ್ದುದು ಸ್ಪಷ್ಟ: ಆಗ ಕುಪ್ಪೆಯರಸನೆಂಬುವನು ಪುಲಿಗೆರೆ ಮುನ್ನೂರನ್ನು ಆಳುತ್ತಿದ್ದನು [ಕ.ಇ.೧, ೧೩. ಸು. ೮೬೬(ಪು.) ಶಿಗ್ಗಾಂವಿ. ಪು. ೧೫] ಶಿಗ್ಗಾಂವಿ ಶಾಸನೋಕ್ತ ಅಮೋಘವರ್ಷನು ನಾಲ್ಕನೆಯ ಅಮೋಘವರ್ಷನಾದ ಕರ್ಕ್ಕನೆಂಬುದಾಗಿ ಹತ್ತನೆಯ ಶತಮಾನದ ಶಾಸನ ಲಿಪಿಯ ಆಧಾರದಿಂದ ಖಚಿತಪಡಿಸಲಾಗಿದೆ. ಆದ್ದರಿಂದ ಪುಲಿಗೆರೆಯ ಅತೇದಿ ಶಾಸನದ ಕಾಲವನ್ನು ಸುಮಾರು ಕ್ರಿ.ಶ. ೮೬೬ ಎಂದು ಮೊದಲು ಭಾವಿಸಲಾಗಿದ್ದುದು ಸರಿಯಲ್ಲ; ಅಂತರ ಬಾಹ್ಯ ಪ್ರಮಾಣಗಳಿಂದ ಅದು ಹತ್ತನೆಯ ಶತಮಾನದ ಉತ್ತರಾರ್ಧಕ್ಕೆ ಸೇರಿದ್ದೆಂದು ತಿಳಿಯಬಹುದು. ಈಗಾಗಲೇ ಈ ಸಂಪ್ರಬಂಧದಲ್ಲಿ ಸೂಚಿಸಿರುವಂತೆ, ಮಣಲೆರ ವಂಶಜರು ಪುಲಿಗೆರೆ ಮತ್ತು ಬೆಳ್ವೊಲ ಪ್ರದೇಶಕ್ಕೆ, ಮಳವಳ್ಳಿ–ಮದ್ದೂರು–ಕುಣಿಂಗಲು ಕಡೆಯಿಂದ, ಸ್ಥಳಾಂತರಿಸಿದ್ದೇ ೯೫೦ ರತರುವಾಯ. ಅದರಿಂದ ಶಿಗ್ಗಾಂವಿ ಮತ್ತು ಪುಲಿಗೆರೆ ಶಾಸನೋಕ್ತ ಮಣಲೆರ ಕುಲಜನು ಕ್ರಿ.ಶ. ೯೭೦ ರ ತರುವಾಯದವನೆಂದು ತೀರ್ಮಾನಿಸಬಹುದು

[ಕ.ಇ.೧, ೧೪ ೧೯೫೯–೪೦, ತೇದಿ.? ಪುಲಿಗೆರೆ (ಧಾರವಾಡ ಜಿಲ್ಲೆ, ಶಿರಹಟ್ಟಿ ತಾಲ್ಲೂಕು): ಬಾ.ಕ. ನಂ. ೪೨ of ೧೯೪೩–೪೪, ಶಿಗ್ಗಾಂವಿ (ಧಾರವಾಡ ಜಿಲ್ಲೆ ಶಿಗ್ಗಾಂವಿ ತಾಲ್ಲುಕು)].

ಗದಗ, ಕುಯಿಬಾಳ, ಪ್ರಿನ್ಸ್ ಆಫ್ ವೇಲ್ಸ್ ಸಂಗ್ರಹಾಲಯ ಈ ಮೂರು ಸ್ಥಳಗಳ ಶಾಸನಗಳಲ್ಲಿ ಸಿಗುವ, ಮಣಲೆರರ ಅನ್ವಯಕ್ಕೆ ಸೇರಿದ ಮೂವರು ಮಹಾಸಾಮಂತರ ವಿಚಾರ ಶಿಗ್ಗಾಂವಿಯ ಶಸನದಲ್ಲೂ ಸಿಗುತ್ತದೆ. [ಕ.ಇ.೧, ೧೪ ಪು. ೩೦]. ಗದಗದ ಶಾಸನವು ಚಾಳುಕ್ಯರ ಆರನೆಯ ವಿರಮಾದಿತ್ಯನ ಆಳ್ವಿಕೆಗೆ ಸೇರಿದ್ದು, ಇದರಲ್ಲಿ ಸಗರಕುಲದ ಮುರು ತಲೆಮೊರೆಯ ಪೀಳಿಗೆಯನ್ನು ಪರಿಚಯಿಸಿದೆ: ಇಂದ್ರಕೇಸಿI, ಇವನ ಮಗ ಮಾರಸಿಂಘ, ಇವನ ಮಗ ಇಂದ್ರಕೇಸಿ ೨ (ಸೌ.ಇ.ಇ. ೧೧–೨, ೨೦೧ ತೇದಿ? ಪು.೨೫೬) ಇದರಿಂದಾಗಿ ಮಹಾಸಾಮಂತ ಒಂದನೆಯ ಇಂದ್ರಕೇಸಿಯೂ, ಕುಯಿಬಾಳ ಶಸನೋಕ್ತನಾದ ಇಂದ್ರಕೇಸಿಯೂ ಅಭಿನ್ನರೆಂಬುದು ಸ್ಥಾಪಿತವಾಗುವ ವಿಷಯ. ಮುಂಬಯಿಯ ಪ್ರಿನ್ಸ್ ಆಫ್ ವೇಲ್ಸ್ ಮೂಸಿಯಮ್ಮಿನ ಮತ್ತು ಗದಗದ ಶಾಸನಗಳ ಆಧಾರಗಳನ್ನು ಹಿಡಿದು ಒಂದನೆಯ ಇಂದ್ರಕೇಸಿಗೆ ಮಾರಸಿಂಘ (ಹ) ಮತ್ತು (ಇಮ್ಮಡಿ) ಜಯಕೇಸಿ–ಎಂಬ ಇಬ್ಬರು ಮಗಂದಿರೆಂದು ತಿಳಿದು ಬರುತ್ತದೆ. ಇದರಿಂದಾಗಿ ಮಾರಸಿಂಘ ಮತ್ತು ಜಯಕೇಸಿ ಎಂಬುವರು ಇಬ್ಬರು ಬೇರೆಯವರಾಗಿರದೆ ಒಬ್ಬನೇ ವ್ಯಕ್ತಿಯೂ ಎರಡು ಹೆಸರಿರಬೇಕೆಂಬ ಹಿಂದಿನ ತಿಳಿವಳಿಕೆ ಸರಿಯಲ್ಲವೆಂದೂ, ಇವರಿಬ್ಬರೂ ಪ್ರತ್ಯೇಕರು ಮತ್ತು ಸಹೋದರರು ಎಂಬ ಖಚಿತವಾಗುತ್ತದೆ. ಹೆಬ್ಬಾಳು, ಕೂಲಿಗೆರೆ, ಆತುಕೂರು, ವಿಜಯಪುರ, ತಾಯಲೂರು ತಗ್ಗಲೂರು ಮೊದಲಾದ ಶಸನಗಳಲ್ಲಿ ಆವರ್ತನಗೊಳ್ಳುವ ಮಣಲೆಯರ ಎಂಬ ಹೆಸರು, ಹತ್ತನೆಯ ಶತಮಾನದ ತರುವಾಯ ಮೆರೆಯಾಗಿ, ಆಯಾ ವ್ಯಕ್ತಿಗೆ ಇಟ್ಟ ಅಂಕಿತನಾಮದಿಂದ ಕೂಡಿದ ಹೆಸರುಗಳು ಕಾಣಿಸುತ್ತವೆ.

ಮಣಲೆರ ಗಾಡಿಗನ [ಕ.ಇ.೧, ನಂ. ೧೪] ತರುವಾಯ, ಚಾಳುಕ್ಯರ ಆಶ್ರಯದಲ್ಲಿ ಅಭ್ಯುದಯ ಪರಂಪರೆಯನ್ನು ಗಳಿಸಿದ ಪ್ರಮುಖನೆಂದರೆ ಇಱಿವಬೆಡಂಗ ಮಾರಸಿಂಗ ದೇವ [ಎ.ಇ.

೧೬, ೨೪. ೧೦೩೮ ಪು. ೩೩೩ ಹುಲಗೂರು]. ಸಗರಕುಲದ ಅಧಿಕಾರಿಯಾದ ಇಱುವಬೆಡಂಗ ಮಾರಸಿಂಗನು ಜಿನಭಕ್ತನಾಗಿ ಕಾಣುತ್ತಾನೆ. ಈತನ ಪ್ರಶಸ್ತಿಯನ್ನು ಕುರಿತು ಪರಿಭಾವಿಸತಕ್ಕ ಅಂಶವಿದೆ. ಮಣಲೆರ ವಂಶದಲ್ಲಿ ಆತಕೂರು ಶಾಸನೋಕ್ತನಾದ ಮಣಲೆರನಿಗೆ ಇಱುವ ಬೆಡಂಗ ಪ್ರಶಸ್ತಿಯಿತ್ತು; ಈ ಪ್ರಶಸ್ತಿ ಮಾಲಿಕೆಯಲ್ಲಿ ಅದೇ ಪ್ರಾಚೀನ-ಪ್ರಥಮ ಪ್ರಯೋಗವೆಂದೂ, ಅನಂತರ ಚಾಳುಕ್ಯರ ತೈಲಪನ ಮಗನಾದ ಸತ್ಯಾಶ್ರಯನಿಗೆ ಅದು ಬಳಕೆಯಾಗಿದೆಯೆಂದೂ ತಿಳಿಸಿದ್ದಾಗಿದೆ. ಚಾಳುಕ್ಯ ಚಕ್ರವರ್ತಿ ಇರಿವ ಬೆಡಂಗ ಸತ್ಯಾಶ್ರಯನ ಆಶ್ರಯದಲ್ಲಿ ಪಲ್ಲವಿಸಿದ ಮಣಲೆರ ಮನೆತನದ ಈ ಮಾರಸಿಂಗನಿಗೂ, ಈತ ತೋರಿದ ರಾಜನಿಷ್ಠೆಯ ಪರಿಣಾಮವಾಗಿ ಪ್ರಾಪ್ತವಾದ ಪ್ರಶಸ್ತಿ 'ಇತೆವಬೆಡಂಗ' ಸತ್ಯಾಶ್ರಯನ ಕಾಲದಿಂದ ಜಯಸಿಂಹನ ಕಲದವರೆಗೆ ಈತನು ಅಧಿಕಾರಿಯಾಗಿದ್ದನೆಂಬುದಕ್ಕೆ ಶಾಸನಾಧಾರವಿದೆ.

ಚಾಳುಕ್ಯರ ಇಮ್ಮಡಿ ಜಯಸಿಂಹನ (ಜಗದೇಕಮಲ್ಲ I)ರಾಜ್ಯಾಡಳಿತದಲ್ಲಿ ಪುರಿಗೆಱೆ ಮುನ್ನೂರರ ನಾಳ್ಗಾವುಂಡ ಮಹಸಾಮಂತನೆನಿಸಿದ್ದ ಇ ಇಱುವ ಬೆಡಂಗ ಮರಸಿಂಗದೇವನು ತನ್ನ ಮಣಲೆರ ಮನೆತನವನ್ನು ರಾಜಕೀಯವಾಗಿಯೂ, ಧಾರ್ಮಿಕವಾಗಿಯೂ ಮುನ್ನಡೆಸಿದನು. ಈತನ ತಾಯಿ ನಾಯಿಬ್ಬರಸಿಯು ಜೈನ ಧರ್ಮ ಸಮುದ್ಧರನೆಯೆನಿಸಿದ್ದಳು: 'ಭಗವದ್ ಅರ್ಹತ್ ಪರಮೇಶ್ವರ ಪರಮಭಟ್ಟಾರಕ ಪದಕಮಲ ಮಧುಕರಂ ಸಮ್ಯಕ್ತ್ವ ರತ್ನಾಕರಂ ಜಿನಧರ್ಮ ಭೂಷಣಂ' ಆದಂಥ ಒಂದನೆಯ ಜಯಕೇಸಿಯು 'ಪುರಿಗೆಱೆ ಮುನ್ನೂರಕ್ಕಂ ನಾಳ್ಗಾವುಂಡುಗೆಯ್ಯುತ್ತಿ'ದ್ದನು [ಎ.ಇ.೧೬, ೨೪. ೧೦೩೮. ಹುಲಗೂರು ಪು. ೩೩೩].

ಪಶ್ಚಿಮ ಚಾಳುಕ್ಯರ 'ತ್ರೈಲೋಕ್ಯಮಲ್ಲ ವೀರನೊಳಂಬ ಪಲ್ಲವ ಪೆರ್ಮಾನಡಿ ಜಯಸಿಂಹದೇವರ್ಪ್ಪುರಿಗೆಱೆ ಮೂನೂಱುಂ ಬೆಳ್ವಲ ಮೂನೂಱುಂ ಬನವಸೆ ಪನ್ನಿರ್ಚ್ಛಾಸಿರಮುಂ ಕನ್ದೂರ್ಸಾಸಿರಮುಮೊಳಗಾಗಿ ಪಲವು ಭತ್ತಗ್ರಾಮಂಗಳನಾಳ್ದು ಸುಖಂ ರಜ್ಯಂಗೆಯ್ಯುತ್ತಿಮಿರೆ ತತ್ಪಾದ ಪದ್ಮೋಪಜೀವಿ ಪುರಿಕರ ಪಿರವರರ ಪರಮೇಶ್ವರನುಜ್ವಳ ಕೀರ್ತ್ತಿ ಸಗರ ಮಾರ್ತ್ತಣ್ಡಂ

ಕೇಸರಿಕೇತು ರಾಷ್ಟ್ರಕೂಟಕ ವರನಾ (ತ್ರಿ)ಶತಕ್ಕೆ ನೆಗಟ್ದಜಯಿ ಕೇಸಿನೃಪಂ' ಹೆಸರುವಾಸಿಯಾಗಿದ್ದನು [ಸೌ.ಇ.ಇ. ೨೦. ೫೫, ಕ್ರಿ.ಶ. ೧೦೮೨. ಲಕ್ಷ್ಮೇಶ್ವರ] 'ತ್ರಿಶತಕ್ಕೆ ನೆಗಟ್ದಿ' ಎಂದರೆ ಪುಲಿಗೆರೆ 'ಮುನ್ನೂರಕ್ಕೆ ಪ್ರಸಿದ್ಧಿ ಹೊಂದಿದ' ಎಂದರ್ಥ.

ಮೇಲ್ಕಂಡ ಪುಲಿಗೆರೆ ಶಾಸನೋಕ್ತನಾದ ಜಯಕೇಸಿಯು ಇಮ್ಮಡಿ ಜಯಕೇಸಿ ಯೆಂದು ತಿಳಿದು ಬರುತ್ತದೆ; ಈತನು ಒಂದನೆಂದು ಇಂದ್ರಕೇಸಿಯು ತರುವಾಯ ಬಂದವನು. ಒಂದನೆಯ ಇಂದ್ರಕೇಸಿಯು ತ್ರೈಲೋಕ್ಯಮಲ್ಲ ಒಂದನೆಯ ಸೋಮೇಶ್ವರ ಚಕ್ರವರ್ತಿಯ ಮಹಾಸಾಮಂತನಾಗಿದ್ದನು. [ಸೌ.ಇ.ಇ. ೨೦, ೩೮. ೧೦೫೮. ಕುಯಿಬಾಳ (ಧಾರವಾಡ ಜಿಲ್ಲೆ ಕುಂದುಗೋಳ ತಾಲ್ಲೂಕು)] ಸಿಂಹಲಾಂಛನನೂ, ಭಗವದರ್ಹತ್ಪರಮೇಶ್ವರ ಪರಮಭಟ್ಟಾರಕಪದ ಪಂಕಜ ಭ್ರಮರನೂ, ಸಮ್ಯಕ್ತ್ವ ರತ್ನಾಕರನೂ ಮಣಲೆರ ಭೀಮನೂ ಎನಿಸಿದ, ಸಮಸ್ತ ಪ್ರಶಸ್ತಿ ಸಹಿತನಾದ ಸಮಧಿಗತ ಪಂಚಮಹಾಶಬ್ದ ಮಹಾಸಾಮಂತ ಇಂದ್ರಕೇಸಿಯರಸನು ಪುರಿಗೆಱೆ ಮೂನೂಱುಮಂ ರಾಷ್ಟ್ರಕೂಟಕನಾಗಿ, ದುಷ್ಟನಿಗ್ರಹ ವಿಶಿಷ್ಟ ಪ್ರತಿಪಾಳನ ಮಾಡುತ್ತಿದ್ದುದು ಶಾಸನೋಕ್ತವಾಗಿದೆ (ಅದೇ: ಪು. ೪೨-೪೩) ಈತನು ನಿಷ್ಠಾವಂತ ಜೈನನಾದರೂ ಶೈವಗುರುವಾದ ಲೋಕಾಭರಣ ಪಂಡಿತರ ಕಾಲುತೊಳೆದು ಜೋಗೇಶ್ವರ ದೇವರಿಗೆ ದತ್ತಿಗಳನ್ನಿತ್ತನು [ಅದೇ: ಸಾಲು- ೩೯-೪೦]

ಒಂದನೆಯ ಇಂದ್ರಕೇಸಿಯು ಮಡದಿ ಚಂಡಿಕಬ್ಬೆ, ಇವರಿಗೆ ಇಬ್ಬರು ಮಗಂದಿರು; (ಇಮ್ಮಡಿ) ಜಯಸಿಂಹ ಮತ್ತು (ಇಮ್ಮಡಿ) ಮಾರಸಿಂಹ. ತ್ರಿಭುವನ ಮಲ್ಲದೇವ ಆರನೆಯ ವಿಕ್ರಮಾದಿತ್ಯನ ಆಳ್ವಿಕೆಯ ಶಾಸನವಾದ ಗದಗದ ಶಾಸನವು ಇದನ್ನು ಸ್ಪಷ್ಟವಾಗಿಸಿದೆ: ಹುಲಿಗೆಱೆನಾಡ ಮಂಡಳಿಕರೊಳ್ ಸಗರಾನ್ವಯರೊಳ್-ಪ್ರಸಿದ್ಧ ಮಂಡಳಿಕರೊಳ್-ಇಂದ್ರ ಕೇಶಿ ಮಣಲೆರಾನ್ವಯನ್-ಉತ್ತಮನ್-ಆ ನೃಪಾತ್ಮಜಂ ಬಲಯುತ್ತ ಮಾರಸಿಂಗನೃಪನ್-ಆ ನೃಪಸೂನು ಗುಣಾಂಬುರಶಿ ನಿರ್ಮ್ಮಳ ಮತಿಯಿಂದ್ರಕೇಶಿ ನೃಪತಿ ಪ್ರಭು ಧಾರ್ಮಿಕ ಧರ್ಮ್ಮನನ್ದನಂ|

ಸಮಯಚ್ಛಲಮೇವುದೊ ಧರ್ಮಮನೊದವಿಪುದೆನ್ತು ೧ ಪುರಿಕರಪುರವರೇಶ್ವರಂ ೧ ಭುವನೈಕ ವಿಕ್ಯಾತ೧ ಸತ್ಯರಧೇಯ ಶೌಚಗಾಂಗೇಯ–ಎಂಬುದಾಗಿ ವಿಸ್ತಾರವಾಗಿ ಸ್ತುತ್ಯನಾಗಿದ್ದಾನೆ [ಸೌ.ಇ.ಇ. ೧೧–೨, ೨೦೧. ಆತೇದಿ ಗದಗ. ಪು. ೨೫೬].

ಈ ಶಾಸನದಲ್ಲಿನ ಸತ್ಯರಾಧೇಯ, ಶೌಚಗಾಂಗೇಯ ಎಂಬೆರಡು ಪ್ರಶಸ್ತಿಗಳು, ಈ ವಂಶದ ಪ್ರಾಚೀನ ಶಾಸನಗಳಲ್ಲಿ ಒಂದಾದ ವಿಜಯಪುರ ಶಾಸನದಲ್ಲಿ ಬಳಕೆಯಾಗಿರುವ ನನ್ನಿ ಮಣಲೆಯರ –ಶೌಚಮಣಲೆಯರ ಎಂಬೆರಡು ಬಿರುದು ಗಳನ್ನು ನೆನಪಿಸುತ್ತವೆ. ಈ ಶಾಸನ್ದ ಒಕ್ಕಣೆಯಿಂದ ಖಚಿತಗೊಳ್ಳುವಂತೆ, ಇಮ್ಮಡಿ ಇಂದ್ರಕೇಸಿಯು ಮಹಾಮಂಡಳೇಶ್ವರ ನಾಗಿದ್ದನು. ಇದು ಈ ಮನಲೆರ ವಂಶದವರು ಪಡೆದಿದ್ದ ಅತಿ ದೊಡ್ಡ ಸ್ಥಾನ ಮರ್ಯಾದೆ. ಈ ಗದಗ ಶಾಸನದ ತೇದಿ ತಿಳಿಯದೆಂದು ಶಾಸನ ಸಂಪುಟದ ಸಂಪಾದಕರು ತಿಳಿಸಿದ್ದಾರೆ; ಶಾಸನ ತುಂಬ ತ್ರುಟಿತವಗಿರುವುದು ದಿಟ. ಆದರೆ ಅಂತರ ಬಾಹ್ಯ ಆಧಾರಗಳನ್ನು ಅವಲಂಬಿಸಿ ಈ ಗದಗ ಶಾಸನವು ಕ್ರಿ .ಶ. ೧೧೦೦ ಎಂದು ಹೇಳಬಹುದು.

ಚಾಳುಕ್ಯರ ಭುವನೈಕಮಲ್ಲ ಇಮ್ಮಡಿ ಸೋಮೇಶ್ವರನ ಆಳ್ವಿಕೆಗೆ ಸೇರಿದ ಇನ್ನೊಂದು ಶಾಸನ ಒದಗಿಸುವ ಆಧಾರವನ್ನು ಇಲ್ಲಿಗೆ ಅನ್ವಯಿಸಿಕೊಳ್ಳಬೇಕು [ಸೌ.ಇ.ಇ. ೨೦, ೪೭. ೧೦೭೪. ಲಕ್ಷ್ಮೇಶ್ವರ (ಧಾರವಾಡ ಜಿಲ್ಲೆ ಶಿರಹಟ್ಟಿ ತಾಲ್ಲೂಕು) ಪು. ೩೫–೫೫]. ಮಹಾಸಾಮಂತನಾದ ಜಯಕೇಸಿಯು ಒಂದನೆಯ ಇಂದ್ರಕೇಸಿ–ಚಂಡಿಕಬ್ಬೆಯರ ಹಿರಿಯಮಗನೆಂದೂ, ಗದಗ ಶಾಸನೋಕ್ತನಾದ ಮಾರಸಿಂಗನು ಈ ಇಮ್ಮಡಿ ಜಯಕೇಸಿಯ ತಮ್ಮನೆಂದೂ ನಿರ್ಧರಿಸಬಹುದೆಂಬ ಈ ಅಂಶವನ್ನು ಹೇಳಿದ್ದಾಗಿದೆ. ಹಾಗೆಯೇ ಈ ಶಾಸನದ ಸಹಾಯದಿಂದ ಇಮ್ಮಡಿ ಇಂದ್ರಕೇಸಿಯು ಮಾರಸಿಂಗನ ಮಗನೆಂದೂ ಗುರುತಿಸ ಬಹುದಾಗಿದೆ. ಇಮ್ಮಡಿ ಜಯಕೇಸಿ ಅರಸನು ತ್ರಿಭುವನಮಲ್ಲ ವಿಕ್ರಮಾಂಕದೇವನ ಮಹಾ ಸಾಮಂತನಾಗಿ ಇದ್ದನೆಂದು ಹೇಳಲು ಶಾಸಾನಾಧಾರವಿದೆ [ಎ.ಇ.೧೬, ೧೦೭೭. ಪು. ೩೨೯].

ಆರನೇ ವಿಕ್ರಮಾದಿತ್ಯ ಚಕ್ರವರ್ತಿಯು ಆಳುತ್ತಿದಾಗ, ಆತನ ಮಹಾಮಂಡಲೇಶ್ವರ ರಲ್ಲಿ ಒಬ್ಬನಾದ ಮಣಲೆರಾನ್ವಯದ (ಮುಮ್ಮಡಿ) ಜಯಕೇಸಿ ದೇವನು ಕ್ರಿ.ಶ. ೧೧೨೮ ರಲ್ಲಿ ಮತ್ತು ೧೧೩೮ ರಲ್ಲಿ ಪುರಿಗೆರೆಯನ್ನು ಆಳುತ್ತಿದ್ದನು [ಸೌ.ಇ.ಇ. ೧೫, ಳ. ೧೦೭. ಮತ್ತು ೧೧೨೮ ಮತ್ತು ಲಕ್ಷ್ಮೇಶ್ವರ]. ಈ ಜಯಕೇಸಿಯನ್ನು ಮುಮ್ಮಡಿ ಜಯಕೇಸಿ ಎಂದು ಕರೆಯಬಹುದು. ಇಂದ್ರಕೇಸಿ೧–ಚಂಡಿಕಬ್ಬೆಯರ ಹಿರಿಯ ಮಗನೇ ಇಮ್ಮಡಿ ಜಯಕೇಸಿ (ಕ್ರಿ.ಶ. ೧೦೩೮) ಎಂದು ಪರಿಚಯಿಸಿದ್ದಾಗಿದೆ. ಒಂದನೆಯ ಇಂದ್ರಕೇಸಿಯರಸನು ಚಾಳುಕ್ಯರ ತ್ರೈಳೋಕ್ಯಮಲ್ಲ ಸೋಮೇಶ್ವರ೧ ಚಕ್ರವರ್ತಿಯ ಅಧೀನದಲ್ಲಿ ರಾಷ್ಟ್ರಕೂಟಕನಾಗಿ ಪುಲಿಗೆರೆ ಮುನ್ನುರನ್ನು ಆಳುತ್ತಿದ್ದನು. ಈ ಇಂದ್ರಕೇಸಿ ರಷ್ಟ್ರ ಕೂಟಕನ ಒಂದು ಶಾಸನವನ್ನು (ಕ್ರಿ.ಶ. ೧೦೬೦) ಮುಂಬಯಿ ಪ್ರಿನ್ಸ್ ಆಫ್ ವೇಲ್ಸ್ ಮೂಸಿಯಮ್ಮಿನಲ್ಲಿ ಸಂರಕ್ಷಿಸಲಾಗಿರುವುದನ್ನು ಪ್ರಸ್ತಾಪಿಸಿದ್ದಾಗಿದೆ; ಆ ಶಾಸನದ ಪ್ರಕಾರ ಇಂದ್ರಕೇಸಿಯ ಇಬ್ಬರು ಮಗಂದಿರಲ್ಲಿ ಒಬ್ಬನ (ಹಿರಿಯವನ) ಹೆಸರು (ಇಮ್ಮಡಿ) ಜಯಕೇಸಿ ಎಂಬುದಾಗಿಯೂ ಸ್ಪಷ್ಟವಾಗಿ ತಿಳಿದುಬಂದಿದೆ. **[ASR.** ೧೯೩೬–೩೭, ಪು. ೬೮ ಮತ್ತು ಕ.ಇ.೧. ನಂ. ೨೧, ಸು. ೧೧೦೦ ಶಿಗ್ಗಾಂವಿ (ಧಾರವಾಡ ಜಿಲ್ಲೆ) ಪು. ೩೧**]**.

ಮುಮ್ಮಡಿ ಜಯಕೇಸಿಯು "ಸ್ವಸ್ತ್ಯನೇಕ ರಿಪುನೃಪತಿ ಶಿರಶ್ಛೇದಕ ಪ್ರಭಾವ ಪ್ರಸಿದ್ಧ ನಿಜ ವಿಜಯ ಶಾಸನ ಚಕ್ರವರ್ತ್ತಿ ಪ್ರಭಾವೋಚಿತ ರಾಜ್ಯಚಿಹ್ನಾಧಿಪತಿ ಯುಮಪ್ಪ ಶ್ರೀಮನ್ ಮಹಾಮಣ್ಡಳೇಶ್ವರಂ ಸ್ಗರ ಮಾರ್ತ್ತಣ್ಡ ಜಯಕೇಸಿ ದೇವರ್ ಶ್ರೀ ರಾಜಧಾನಿ ಪಟ್ಟಣಂ ಪುಲಿಗೆಱೆ" ಯಿಂದ ಆಳುತ್ತಿದ್ದನು [ಸೌ.ಇ.ಇ. ೨೦, ಳ. ೧೧೨೮. ಲಕ್ಷ್ಮೇಶ್ವರ ಪು. ೧೨೫]. ಇಮ್ಮಡಿ ಇಂದ್ರಕೇಸಿಯ ತರುವಾಯ ಮಹಾಮಂಡಲೇಶ್ವರ ನಾಗಿ ಆ ಅಧಿಕಾರ ಮನ್ನಣೆಗೆ ಮತ್ತೆ ಪಾತ್ರನಾದವನು ಮುಮ್ಮಡಿ ಜಯಕೇಸಿಯೆ. ಈತನು ರಾಜಧಾನಿ ಪುಲಿಗೆರೆಯಲ್ಲಿ ಸ್ವಯಂಭು ದಕ್ಷಿಣ ಸೋಮನಾಥ ದೇವಾಲಯಕ್ಕೆ ಸೇರಿದ ಘಳಿಗೆ (ವಿದ್ಯಾಲಯ)ಕ್ಕೆ ಭೂಮಿಯನ್ನು ದಾನವಾಗಿತ್ತು ತನ್ನ ವಿದ್ಯಾಪಕ್ಷಪಾತ ವನ್ನು ತೋರಿದ್ದಾನೆ [ಅದೇ: ಸಾಲು ೩–೭]. ಈತನನ್ನು ಇನ್ನೊಂದು ಶಾಸನದಲ್ಲಿ

“ರಿಪುನೃಪತಿ ಶಿರಶ್ಛೇದಕ ಪ್ರಭಾವ ಪ್ರಸಿದ್ಧ ದಿಗ್ವಿಜಯ ಶಾಸನಂ ಚಕ್ರವರ್ತಿ ಪ್ರಭಾವೋಚಿತರಾಜ್ಯ ಚಿಹ್ನಾಧಿಪತಿ ಸಪ್ತ ಸಮುದ್ರ ದ್ವೀಪಾ (ಧಿಪತಿ) ಸೂರ್ಯ್ಯ ವಂಶಾಂಬರ ದ್ಯುಮಣಿ ಸಮ್ಯಕ್ತ್ವಚೂಡಾಮಣಿ ಕ್ಷತ್ರಿಯ ಪವಿತ್ರಃ ಕದನ ತ್ರಿಣೇತ್ರಂ ಸಗರ ಮಾರ್ತ್ತಣ್ಡಂ ಶ್ರೀಮನ್ ಮಹಾಮಣ್ಡಳೇಶ್ವರಂ’– ಎಂಬುದಾಗಿ ಪರಿಚಯಿಸಿದೆ [ಅದೇ. ೧೦೭–೧೧೩೮. ಸಾಲು: ೩೯–೪೦]. ಈತನ ಔದಾರ್ಯ, ಧರ್ಮ ನಿರಪೇಕ್ಷವಾದ ಜಾತ್ಯಾತೀತ ಧೋರಣೆ ಮೊದಲಾದ ಗುಣಗಳನ್ನು ಶಾಸನಗಳು ಕೀರ್ತಿಸಿವೆ.  ಈ ಜಯಕೇಸಿ ಮಹಾಮಂಡಳೇಶ್ವರನು ಕುಂಯ್ಯಬಾಳ ಬಸದಿಗೆ ತನ್ನ ಬೀರವಣದೊಳಗೆ ವರ್ಷಕ್ಕೇ ಕೊಟ್ಟ ಪಣ ೧ ಲೆಕ್ಕದ ಮತ್ತು.  ತನ್ನಾಯದಲಿ ಕೊಟ್ಟ ದಾನವನ್ನು ಶಾಸನವೊಂದು ದಾಖಲಿಸಿದೆ [ಸೌ.ಇ.ಇ. ೨೦, ೧೧೮. ೧೧೪೮. ಕುಯಿಬಾಳ್ (ಧಾರವಾಡ ಜಿಲ್ಲೆ ಕುಂದಗೊಳ ತಾಲ್ಲೂಕು) ಪು. ೧೫೬, ಸಾಲು ೭–೮.].  ಈತನನ್ನು ಜಯಕೇಸಿ, ಜಯಕೇಸಿದೇವ, ಜಯಕೇಸಿದೇವರಸ, ಜಯಕೇಸಿನ್, ಜಯಕೇಸಿನೃಪ, ಜಯಕೇಸಿಯರಸ ಮುಂತಾಗಿ ಶಾಸನಗಳು ಬಣ್ಣಿಸಿರುವುದು ಈತನ ಜನಾದರಣೆಗೆ ಸಾಕ್ಷಿ.

ಇದೇ ಸಂದರ್ಭದಲ್ಲಿ ಗಮನಿಸಬಹುದಾದ ಮತ್ತೊಂದು ಮಾಹಿತಿಯಿದೆ.  ಮಹಾರಾಷ್ಟ್ರದ ಸೊಲ್ಲಾಪುರ ಜಿಲ್ಲೆಯಲ್ಲಿ ದೊರೆತಿರುವ, ತುಂಬ ತ್ರುಟಿತವಾಗಿರುವ ಶಾಸನವೊಂದು ಚಾಳುಕ್ಯರ ವಿಕ್ರಮಾಂಕದೇವನ ೬ ಆಳ್ವಿಕೆಗೆ ಸೇರಿದ್ದಾಗಿದೆ.  ಅದರಲ್ಲಿ ಸಗರವಂಶ ಎಂದಷ್ಟೇ ಕಾಣುತ್ತಿದ್ದು ಅದರ ಹಿಂದು ಮುಂದುಗಳೊಂದೂ ಕಾಣದೆ ಮುಕ್ಕಾಗಿದೆ **[Inscriptions from Solapur District, No.** ೭. ಪು. ೧೨ ೧೧ನೆಯ ಶ.**]**.  ಇದರಲ್ಲಿ ಇಮ್ಮಡಿ ಜಯಕೇಸಿಯ ಮಗಂದಿರ ವಿಚಾರ ಪ್ರಸ್ತಾಪಿತವಗಿರುವ ಸಾಧ್ಯತೆಯಿದೆ.

ಮೇಲ್ಕಂಡ ವಿವರಗಳನ್ನು, ಆಯಾ ಶಾಸನಗಳು ಒಳಗೊಂಡಿರುವ ಮಾಹಿತಿಗಳನ್ನು ಅಳವಡಿಸಿಕೊಂಡು, ಒಂದು ವ್ಯವಸ್ಥಿತ ಸಂಯೋಜನೆಯಿಂದ ಮಣಲೆಯರ ಮನೆತನದ ಯಶೋಗಾಥೆಯನ್ನು ಪರಿಶೀಲಿಸಬಹುದು.

## ಮಣಲೆರ–ಜಯಕೇಸಿ

ಸಗರವಂಶದ ರಾಜ ಪ್ರತಿಷ್ಠೆಯನ್ನೂ, ಪ್ರಸಿದ್ಧಿಯನ್ನೂ, ಸಾಮಾಜಿಕ ಘನತೆಯನ್ನೂ ದೊಡ್ಡ ಪ್ರಮಾಣದಲ್ಲಿ ಹೆಚ್ಚಿಸಿದವನು ಮಣಲೆರ ಎಂಬ ಹೆಸರಿನ ಪರಾಕ್ರಮಿ. [ಎ.ಇ.೬, ಕ್ರಿ.ಶ. ೯೪೯ ಪು. ೫೪]. ಸಗರ ವಂಶಕ್ಕೆ ಈ ಮಹಾಪುರುಷನು ಎಷ್ಟು ಕೀರ್ತಿಯನ್ನು ಗಳಿಸಿಕೊಟ್ಟ ಪ್ರಮುಖನಾದನೆಂದರೆ, ಈತನ ಹೆಸರಿನಿಂದಲೇ ಈ ಸಗರ ಕುಲವನ್ನು ಕರೆಯುವ, ನಿರ್ದೇಶಿಸುವ ಪರಿಪಾಟಿಯೊಂದು ರೂಢಿಗೆ ಬಂದಿತು; ಈತನಿಗಂತಲೂ ಮೊದಲು ಇದೇ ಹೆಸರಿನವರು ಈ ವಂಶಜರು ಇದ್ದರೆಂಬುದೂ ದಿಟವೇ ಆದರೂ ಈತನು ತನಗಿಂತ ಹಿಂದಿನವರಿಗಿಂತ ಎತ್ತರಕ್ಕೇರಿದ್ದನು. ಮಣಲೆಯರು, ಮಣಲವಂಶ, ಮಣಲೆಯರ ಮನೆತನ, ಸಗರ ಕುಲ, ಸಗರವಂಶ–ಇವು ಪರ್ಯಾಯ ವಾಚಿಗಳಾದವು. ವ್ಯಕ್ತಿವಾಚಕವಾಗಿಯೂ ಪರಿಣಮಿಸಿತು ಎಂಬುದು ಪರಿಭಾವನಾರ್ಹವಾಗಿದೆ.

ಸಗರವಂಶದವರು ಪಶ್ಚಿಮ ಚಾಳುಕ್ಯರ ಆಸರೆಗೆ ಬರುವ ಮೊದಲು ಗಂಗರ ನೆರಳಲ್ಲಿ ಬೇರುಬಿಟ್ಟು ಬಾಳಿದವರು. ಗಂಗರ ಸಹಾಯದಿಂದ ಈ ಸಗರ ಕುಲಜರು ಪ್ರತಿಷ್ಠಿತ ರಾಷ್ಟ್ರಕೂಟ ಚಕ್ರಾಧಿಪತ್ಯದಲ್ಲಿ ಸ್ಥಾನಮಾನಗಳನ್ನು ಗಳಿಸಿದರು. ಗಂಗರ–ರಾಷ್ಟ್ರಕೂಟರ ಸಂಯುಕ್ತ ಪೋಷಣೆಯಲ್ಲಿ ಜೀವಿಸಿದ ಸಗರರು, ಆ ಎರಡು ರಾಜ ಕುಲಗಳು ಮರೆಯಾದ ಮೇಲೆ ಪಶ್ಚಿಮ ಚಾಲುಕ್ಯರ ಕೈಕೆಳಗಿನ ಸಾಮಂತರಾದರು; ಇಲ್ಲಿಯೂ ಹಿಂದಿನ ಉನ್ನತ ಗೌರವಾದರಗಳನ್ನು ಗಳಿಸಿ ಮಾನ್ಯರಾದರು. ಸಗರವಂಶಜರು ತಮ್ಮ ಮೊದಲ ದಣಿಗಳಾದ ಗಂಗರಂತೆಯೇ ಯುದ್ಧವೀರರು ಮತ್ತು ಜೈನಧರ್ಮೀಯರು. ಜೈನಧರ್ಮ ಸಂರಕ್ಷಣೆಗೆ ಇವರ ದೇಣಿಗೆಯು ಗಣನೀಯ ಪ್ರಮಾಣದಲ್ಲಿದೆ. ಇವರ ರಾಜ ಲಾಂಛನ ಸಿಂಹ [ಕೇಸರಿಕೇತು, ಗನಾರಿಧ್ವಜ: ಸೌ.ಇ.ಇ. ೨೦, ೪೭ ಮತ್ತು ೫೫]; ವರ್ಧಮಾನ ಮಹಾವೀರ ತೀರ್ಥಂಕರನ ಲಾಂಛನ 'ಸಿಂಹ'ವೆಂಬುದನ್ನು ಗಮನಿಸಬೇಕು.

ಆತಕೂರು ಮಣಲೆರನ ತರುವಾಯದ ಕೆಲವು ಶ್ರೇಷ್ಠ ಪುರುಷರು ಈ ಸಗರಕುಲದಲ್ಲಿ ಆಗಿ ಹೋದರು. ಅವರಲ್ಲಿ ಮಣಲವಂಶದ ಇಂದ್ರಕೇಶಿಯರಸನ ಮಗ ಮಹಾಸಾಮಂತ ಜಯಕೇಸಿಯರಸನು ಬೆಳ್ವೊಲದ ಪುರಿಗೆಱೆ ಮುನ್ನೂರರ ರಾಷ್ಟ್ರಕೂಟಕನಾಗಿದ್ದನು. ಪುರಿಗೆರೆ ಎಂಬುದು ಪುಲಿಗೆರೆಯ ಪರ್ಯಾಯರೂಪ; ಇದು ಆಧುನಿಕ ಲಕ್ಷ್ಮೇಶ್ವರ. ಈಗಾಗಲೇ ಪ್ರಸ್ತಾಪಿಸಿರುವ ಆತಕೂರು ಶಾಸನೋಕ್ತರಾದ ಇಮ್ಮಡಿ ಬೂತುಗ ಮತ್ತು ಮಣಲೆರರನ್ನು ಇಲ್ಲಿ ಪುನಃ ಉಲ್ಲೇಖಿಸಬೇಕಾಗಿದೆ. ತಕ್ಕೊಲದ ಕಾಳಗದಲ್ಲಿ ಗಂಗರ ಬೂತುಗನು ತೋರಿದ ಪರಾಕ್ರಮದಿಂದ ಸಂಪ್ರೀತನಾದ ರಾಷ್ಟ್ರಕೂಟ ಚಕ್ರವರ್ತಿ ೩ನೇ ಕೃಷ್ಣ (ಕನ್ನರದೇವ)ನು ಬೂತುಗನಿಗೆ 'ಬನವಸೆ ಪನ್ನಿರ್ಚ್ಛಾಸಿರಮುಂ ಬೆಳ್ವೊಲ ಮೂನೂಱುಂ ಪುರಿಗೆಱೆ ಮೂನೂಱುಂ ಕಿಸುಕಾಡೆೞ್ಪತ್ತುಂ ಬಾಗಿನಾಡೆೞ್ಪತ್ತುವರಂ ಮೆಚ್ಚುಗೊಟ್ಟಂ' [ಎ.ಇ. ೨, ಪು. ೧೭೨]; ಇದು ಕ್ರಿ.ಶ. ೯೫೦ ರ ಘಟನೆ. ಈ ವಿಜಯದ ಮತ್ತು ತನ್ನ ಅಧಿಕಾರೋನ್ನತಿಯ ಪ್ರಾಪ್ತಿ ಸ್ಮಾರಕವಾಗಿ ಬೂತುಗನಿಮ್ಮಡಿಯು ಪುಲಿಗೆರೆಯಲ್ಲಿ ಪೆರ್ಮ್ಮಾಡಿ ಬಸದಿಯನ್ನು ಮಾಡಿಸಿದನು. ಮುಂದೆ ಇದನ್ನು ಚಾಳುಕ್ಯರ ಮಲ್ಲನು ಧವಳಿತ ಉತ್ತುಂಗ ತರಳತರಂಗಳುಮಾಗೆ ಮಾಡಿಸಿದನು [ಸೌ.ಇ.ಇ. ೧೧-೧, ೧೦೩. ೧೦೬೫. ಪು. ೯೯-೧೦೨: ಬಾ.ಕ.ಇ. ೧-೧, ೧೦೩. ನಂದವಡಿಗೆ (ಬಿಜಾಪುರ ಜಿಲ್ಲೆ, ಹುನಗುಂದ ತಾಲ್ಲೂಕು)]

ಮೇಲೆ ಹೇಳಿದ ಪೆರ್ಮಾಡಿ ಬಸದಿಗೆ ಮಣಲವಂಶಜ ಜಯಕೇಸಿಯರಸನು, ಆತ ಪುರಿಗೆಱೆ ಮುನ್ನೂರರ ರಾಷ್ಟ್ರಕೂಟಕನಾಗಿದ್ದಾಗ, ಕ್ರಿ.ಶ. ೧೦೭೪ ರಲ್ಲಿ ಭೆಟ್ಟಿ ಕೊಟ್ಟನು. ಇದಕ್ಕೆ ತನ್ನ ವಂಶದ ಮೂಲ ಪುರುಷನೆನಿಸಿದ ಮಣಲೆರನ ಸ್ಮರಣೆಯೂ ಒಂದು ಪ್ರಬಲ ಕಾರಣ. ಪೆರ್ಮಾಡಿ ಬಸದಿಯನ್ನು ಕಟ್ಟಿಸಿದ್ದ ಬೂತುಗನ ಅಂಕಕಾಱನಾಗಿ ಮಣಲೆರನು ಮಾನ್ಯವಾಗಿ ಪಡೆದನೆಂದು ಈ ಹಿಂದೆಯೇ ಹೇಳಿದ್ದಾಗಿದೆ. ಹೀಗೆ ಮಣಲೆರನನ್ನು ಬಹುವಾಗಿ ಪುರಸ್ಕರಿಸಿದ ಗಂಗರ ಬೂತುಗನು ಕಟ್ಟಿಸಿದ ಬಸದಿಯೆಂಬ ಅಭಿಮಾನವೂ ಹೆಣೆದುಕೊಂಡು ಜಯಕೇಸಿಯು ಪ್ರಥಮ ನಂದೀಶ್ವರದ

ಆದಿತ್ಯವಾರದಂದು ಪೆರ್ಮಾಡಿ ಬಸದಿಯ ದರ್ಶನಕ್ಕೆ ಬಂದನು [ಸೌ.ಇ.ಇ. ೨೦, ೪೭. ೧೦೭೪ ಲಕ್ಷ್ಮೇಶ್ವರ. ಪು. ೫೩-೫೫] ಈ ಶಾಸನದ ಒಕ್ಕಣೆ ಉದ್ಧೃತವಾಗಿದೆ:

ಪುರಿಗೆಱೆಗೆ ಬಿಜಯಂಗೆಯ್ದಲ್ಲಿಯ ಶ್ರೀ ಶಂಖತೀರ್ತ್ಥಾದಿ ಜೈನ ಮಂದಿರಂಗಳಂ
ವನ್ದನಾಭಕ್ತಿಪೂರ್ವ್ವಕಂ ನೋಡುತ್ತಂ ಬಂದು ಪೆರ್ಮಾಡಿಯ ಬಸದಿಗೆ ವನ್ದಲ್ಲಿಯ
ಮೂಲಸಂಘಾನ್ವಯದ ಬಳಾತ್ಕಾರಗಣದ ಗಣ್ಡವಿಮುಕ್ತ ಭಟ್ಟಾರಕರ ಶಿಷ್ಯರ್
ತ್ರಿಭುವನಚಂದ್ರ ಪಣ್ಡಿತದೇವರಂ ಕಣ್ಡು ತ್ರಿಕರಣ ಸುದ್ದಿಯಿಂ ಬನ್ದಿಸಿ ಕುಳ್ಳಿಱ್ದು

ಪುರಿಗೆಱೆಯೊಳ್ಪೆರ್ಮಾಡಿಯ
ಪುರವರಮಳಿದಿಱ್ದುದಂ ಗಜಾರಿಧ್ವಜನಾ
ದರದಿಂದಮೆ ನೋಡಿ ಪುನ
ರ್ಭ್ಭರಣಂ ಮಾಡಲ್ಕೆವೇಡಿ ಜಯಕೇಶಿ ನ್ರಿಪಂ ||

(ಈ ಕಂದ ಪದ್ಯ ಸೌ.ಇ.ಇ. ೨೦, ೫೫.೧೦೮೨. ಲಕ್ಷ್ಮೇಶ್ವರ. ಪು. ೭೮ ರಲ್ಲೂ ಪುನರಾವೃತ್ತಿಗೊಂಡಿದೆ)

ಸ್ಮರರೂಪಂ ಪೆರ್ಮ್ಮಾಡಿಯ
ಪುರವರದೊಳ್ ನಡೆವ ಮನ್ನೆಯದ ಕಿಱುದೆಱೆಯಂ
ಪುರದಾನಿಕೆಯುಳ್ಳದೀಪಂ
ಪರಿಹಾರಂಬಿಟ್ಟು ಮಾಡಿದಂ ತತ್ಪುರಮಂ ||

ಹೀಗೆ ಸರ್ವ್ವಬಾಧಾ ಪರಿಹಾರಮಾಗೆ ದಾಯದ್ರಮ್ಮದ ಕಿಱುದಱಿಗಳುಮಂ ಬಿಟ್ಟು ನಡೆಯಿಸಿದ ಜಯಕೇಸಿಯ ಮತ್ತು ಅವನ ಪೂರ್ವಜರ ಜೈನಧರ್ಮಾನುರಾಗ ದೀರ್ಘವಾಗಿಯೇ ಶಾಸನೋಕ್ತವಾಗಿದೆ (ಅದೇ: ಪು. ೫೪–೫೫). ಕೂಲಿಗೆರೆ ಶಾಸನದ ಕಾಲದಿಂದಲೂ (ಕ್ರಿ.ಶ. ೯೧೬) ಮಣಲೇರ ವಂಶದವರಿಗೆ ನಾನಾ ತೆರಿಗೆಗಳನ್ನು ಅನುಭೋಗಿಸುವ ಅಧಿಕಾರ ಉದ್ದಕ್ಕೂ ಆಯಾ ಕಾಲದ ರಾಜರಿಂದ ದತ್ತವಾಗುತ್ತ ಬಂದಿದೆ.

ಚಾಳುಕ್ಯ ಸಾಮ್ರಾಜ್ಯದ ಚರಿತ್ರೆಯಲ್ಲಿ ಲಕ್ಷ್ಮೇಶ್ವರದ ಈ ಶಾಸನವು ಬಹು ಮುಖ್ಯವಾದ ಹೊರಳುದಾರಿಯ ಹೊಸ್ತಿಲಲ್ಲಿ ನಿಂತ ಶಾಸನ ಮತ್ತು ಇಸವಿ ಆಗಿದೆ.  ಏಕೆಂದರೆ ಕ್ರಿ.ಶ. ೧೦೭೪ರಲ್ಲಿ, ತ್ರೈಳೋಕ್ಯಮಲ್ಲ ಸೋಮೇಶ್ವರ ೧ ಚಕ್ರಿಯ ಹಿರಿಯ ಮಗನಾದ ಭುವನೈಕಮಲ್ಲ ಸೋಮೇಶ್ವರ ೨ ರಾಜನಾಗಿ ಈ ಅವಧಿಯಲ್ಲಿ ಇನ್ನೂ ಆಳುತ್ತಿದ್ದರೂ, ಅವನ ತಮ್ಮನಾದ ವಿಕ್ರಮಾಂಕ ಪೆರ್ಮ್ಮಾಡಿಯು ಈ ವೇಳೆಗೆ ಅಣ್ಣನ ಎದುರಾಳಿಯಾಗಿ ಹುರಿಗೊಂಡು ಪೂರ್ಣವಾಗಿ ತಿರುಗಿಬಿದ್ದನು ಮತ್ತು ತನ್ನ ರಾಜಶಕ್ತಿಯನ್ನು ಸಂಚಯಿಸಿ ತಾನೇ ಸ್ವತಂತ್ರನೆಂಬಂತೆ ವರ್ತಿಸತೊಡಗಿದನು.  ಭುವನೈಕಮಲ್ಲನಿಗೆ ಈಗ ಬಲಗೈ ಬಂಟನಾಗಿ ಆಸರೆಯಿತ್ತು ನಿಂತಿದ್ದವನು ನೆಚ್ಚಿನ ಅಣುಗಾಳು ಲಕ್ಷ್ಮರಸ ಮಹಾಮಂಡಳೇಶ್ವರನೊಬ್ಬನೇ.  ಸಗರ ಕುಲದ ಜಯಕೇಸಿ ನೃಪನು ಪುರಿಗೆರೆಯಲ್ಲಿ ಈ ಅವಧಿಯಲ್ಲಿ ರಾಷ್ಟ್ರಕೂಟಕನಾಗಿದ್ದನು.  ರಾಷ್ಟ್ರಕೂಟಕ ನೆಂದರೆ ರಾಷ್ಟ್ರಿಕ ಅಥವಾ ಭೋಜಕ (ರಾಜ್ಯಪಾಲ) ಎಂದರ್ಥ [ಕನ್ನಡ ಸಾಹಿತ್ಯ ಪರಿಷತ್ತಿನ ಬೃಹತ್ ಕನ್ನಡ ನಿಘಂಟಿನಲ್ಲಿ'ರಾಷ್ಟ್ರಕೂಟಕ' ಎಂಬ ಶಬ್ದವೇ ಬಿಟ್ಟು ಹೋಗಿದೆ, ಅದರ ಮರು ಮುದ್ರಣದಲ್ಲಾದರೂ ಈ ಶಬ್ದ ಮತ್ತು ಪ್ರಯೋಗ ಸೇರ್ಪಡೆಯಾಗಬೇಕು].  ಜಯಕೇಸಿಯು ರಾಷ್ಟ್ರಕೂಟನಾಗಿದ್ದಾಗ ಚಕ್ರವರ್ತಿ ಭುವನೈಕ ಮಲ್ಲ ಪಾದಪದ್ಮೋಪಜೀವಿ ಮಹಾಂಡಲೇಶ್ವರ ಲಕ್ಷ್ಮರಸನು ಎರಡಱು ನೂಱುಮಂ ಸುಖದಿನಾಳುತ್ತಮಿರೆ:

ನಾನಾ ದ್ವಿಪದೊಳಗ್ರಿಮಂ ನೆಗಱ್ದ ಜಂಬೂದ್ವೀಪಮಾ ದ್ವೀಪದೊಳ್

ನಾನಾ ಕ್ಷೇತ್ರದೊಳುತ್ತಮಂ ಭರತಮಾ ಭೂಭಾಗದೊಳ್ ಕುನ್ತಳಂ

ತಾನತ್ಯೂರ್ಜ್ಜಿ ತಮ್ಮಲ್ಲಿ ಭೋಗಿಜನರಮ್ಯಂ ಬೆಳ್ವೊಲಂ ತನ್ಮುಖ

ಸ್ಥಾನಂ ಶೋಭಿಕುಮಾಗಳುಂ ಪುರಿಕರ ಶ್ರೀರಾಜಧಾನ್ಯಾಹ್ವಯಂ ||

ಪುರಿಕರ ಪುರವರ ಪರಮೇ

ಶ್ವರನುಜ್ವಳ ಕೀರ್ತ್ತಿ ಸಗರ ಮಾರ್ತ್ತಣ್ಡಂ ಕೇ

ಸರಿಕೇತು ರಾಷ್ಟ್ರಕೂಟಕ

ವರನಾ ತ್ರಿಶತಕ್ಕಮಿಂದ್ರಕೇಶಿ ನರೇಂದ್ರ ||

ತತ್ಪುರಿಕರ ವಿಷಯಾಧಿಪ

ನುತ್ಪಾಟಿತವೈರಿ ನೆಗಟ್ದಿ ಮಣಲರ ಭೀಮಂ

ಸತ್ಪಾತ್ರದಾನ ನಿಧಿಯ

ಹರ್ತ್ತಾಪದಾಬ್ಜಾಳಿಯಿಂದ್ರಕೇಶಿ ನರೇಂದ್ರಂ ||

ಆತನ ಪಿರಿಯರಸಿ ಗುಣಾ

ನ್ವಿತೆ ಪತಿವ್ರತೆ ಚರಿತ್ರವತಿ  ವಿಶದಗುಣ

ಖ್ಯಾತವತಿ ಸತ್ಯವತಿ ಧಾ

ತ್ರೀ ತಳದೊಳ್ ಚಂಡಿಕಬ್ಬೆಯೆನೆ ಪೊಗಳದರಾರ್ ||

ಅವರ್ಗ್ಗಗ್ರಸೂನು ಭಾವೋ

ದ್ಭವ ಮೂರ್ತ್ತಿ ಸುಧಾಂಶು ವಿಶದಕೀರ್ತ್ತಿ ಜಯಶ್ರೀ

ದೇವನಮಳ ಮಣಲಕುಳವರ

ಕುವಳದ ಶೀತಾಂಶು ಸಗರ ಮಾರ್ತ್ತಣ್ಡ ನೃಪಂ ||

ಸ್ವಸ್ತಿ ಸಮಧಿಗತ ಪಂಚಮಹಾಶಬ್ದ ಮಹಾಸಾಮನ್ತಂ ವಿಜಯಶ್ರೀಕಾನ್ತಂ ಮಣಲೆರಾನ್ವಯ ಪ್ರಸೂತಂ ಸಿಂಹಲಾಂಛನ ಪ್ರಸೂತಂ ಪುರಿಕರ ಪುರವರೇಶ್ವರಂ ಕದನಮಹೇಶ್ವರಂ ಪ್ರಚಣ್ಡ ಮಣ್ಡಳಾಗ್ರಮಣ್ಡಿತ ದೋರ್ದ್ದಣ್ಡಂ ಸಗರ ಮಾರ್ತ್ತಣ್ಡಂ ಕಾಮಿನೀಕಾಮಂ ಮಣಲರ ಭೀಮಂ ತುರಗ ರೇವನ್ತಂ ಪರಬಳಕ್ರಿತಾನ್ತಂ ಸಾಹಸೋತ್ತುಂಗಂ ಮನ್ನೆಯಸಿಂಗಂ ನಾಮಾದಿ ಸಮಸ್ತ ಪ್ರಶಸ್ತಿ ಸಹಿತಂ ಶ್ರೀ ಮನ್ಮಹಾಸಾಮನ್ತಂ ಜಯಕೇಶಿಯರಸರ್ ಪುರಿಗೆಱೆ ಮೂನೂಱರ್ಕ್ಕಂ ರಾಷ್ಟ್ರಕೂಟಕನಾಗಿ ಸುಖದಿಂ ರಾಜ್ಯಂಗೆಯೆ

ಶ್ರೀರಮಣಿಗೆ ಸಮರಜಯ

ಶ್ರೀರಮಣಿಗೆ ತಾರಜಾರಶಶಿವಿಶದಯಶ

ಶ್ರೀರಮಣಿಗೆ ಸಕಳವಚ

ಶ್ರೀರಮಣಿಗೆ ರಮಣನಲ್ತೆ ಜಯಕೇಶಿನ್ರಿಪಂ ||

ಅನ್ನೆನಿಸಿದ ಜಯಲಕ್ಷ್ಮೀ

ಕಾನ್ತಂ ದುಷ್ಟಾಶ್ವಚಯಕಿದಾನೆನ್ನನೆ ರೇ

ವನ್ತಂ ವಿದ್ವಿಟ್ ನ್ರಿಪತಿಕ್ರಿ

ತಾನ್ತಂ ಸುಖದಿನ್ದ ಮಿಟ್ಟು ಜಯಕೇಶಿನ್ರಿಪಂ ||

ಮೇಲ್ಕಂಡ ಶಾಸನದ ವರ್ಣನೆಯಿಂದ ತಿಳಿದು ಬರುವ ಪ್ರಕಾರ ಸಗರವಂಶ (ಮಣಲೆರಾನ್ವಯ)ದಲ್ಲಿ ಆತುಕೂರು ಮಣಲೆರನ ತರುವಾಯ ಪ್ರಸಿದ್ಧನಾದವನು ಜಯಕೇಶಿ ನೃಪನು. ಈತನು ಇಂದ್ರಕೇಶಿ ನರೇಂದ್ರ ಮತ್ತು ಚಂಡಿಕಬ್ಬೆ ದಂಪತಿಗಳ ಹಿರಿಯ ಮಗ. ಈತನನ್ನು ಶಿಗ್ಗಾಂವಿಯ ಶಾಸನವೂ ಶ್ಲಾಘಿಸಿದೆ : ಸಗರ ವಂಶದೊಳ್ ನೆಗೞ್ದಿರ್ದ್ದನೆ ಜಯಕೇಸಿಯಾತನ ಸುತಂ ನೆಗೆೞ್ದಿಂದ್ರ ಕೇಸಿಯಾ(ತನ) (ಪಿರಿಯ) ತನಯಂ ಜಯಕೇಸಿಯೆನ್ದಡೆ ಪುಗೞ್ವು. . . .ನಗಣ್ಡರಸಂ ಸಮಧಿಗತ ಪಂಚಮಹಾಸಬ್ದ ಮಹಾ(ರಾಷ್ಟ್ರಕೂಟಕಂ) ಮಣಲೆರಾನ್ವಯ ಪ್ರಸೂತ ಸಿಂಘ ಲಾಂಛನ.

. . [ಕ.ಇ. ೧, ೨೧. ಸು. ೧೧೦೦ ಶಿಗ್ಗಾಂವಿ (ಧಾರವಾಡ ಜಿಲ್ಲೆ)] ತನ್ನ ತಂದೆ ಯಂತೆ ಈತನೂ ಸಗರಕುಲಮಾರ್ತ್ತಂಡನೂ, ಮಣಲೆರವಂಶದಲ್ಲಿ ಭೀಮನೂ ಆಗಿದ್ದನು. ಈತನಿಗೆ ಪಂಚಮಹಾಶಬ್ದದ ಮರ್ಯಾದೆಯಿತ್ತು. ಚಾಳುಕ್ಯರ ಮಹಾಸಾಮಂತಿಕೆ ಯಿತ್ತು. ಈ ತಂದೆ ಮಕ್ಕಳು ಪುಲಿಗೆರೆ ಪುರವರಾಧೀಶ್ವರರು ಮತ್ತು ಪುಲಿಗೆರೆ-ಅಣ್ಣಿಗೆರೆಯ ಪ್ರದೇಶ ಪರಿಸರವು ಇವರ ಚಟುವಟಿಕೆಗಳ ಕೇಂದ್ರವಾಗಿತ್ತು.

ಚಾಳುಕ್ಯರ ಯುವರಾಜ ಅಣ್ಣನಂಕಕಾಱ ತ್ರೈಳೋಕ್ಯಮಲ್ಲವೀರನೊಳಂಬ ಪಲ್ಲವ ಪೆರ್ಮ್ಮಾನಡಿ ಜಯಸಿಂಹದೇವನು ಪುರಿಗೆಱೆ ಮೂನೂಱುಂ ಬೆಳ್ವಲ ಮೂನೂಱುಂ ಬನವಸೆ ಪನ್ನಿರ್ಚ್ಛಾಸಿರಮುಂ ಕನ್ದೂರ್ಸಾಸಿರ ಮುಮೊಳಗಾಗಿ ಪಲವುಂ ಭತ್ತಗ್ರಾಮಂಗಳನಾಱ್ದು ಸುಖಂ ರಾಜ್ಯಂಗೆಯ್ಯುತ್ತುಮಿರೆ- ಆ ಅವಧಿಯಲ್ಲಿ ಈ ಜಯಕೇಸಿII ನೃಪನು ರಾಷ್ಟ್ರಕೂಟನಾಗಿದ್ದನು :

ಪುರಿಕರ ಪುರವರ ಪರಮೇ
ಶ್ವರನುಜ್ವಳಕೀರ್ತ್ತಿ ಸಗರ ಮಾರ್ತ್ತಣ್ಡಂ ಕೇ
ಸರಿಕೇತು ರಾಷ್ಟ್ರಕೂಟಕ
ವರನಾ ತ್ರಿ ಶತಕೆ ನೆಗಟ್ದಿ ಜಯಕೇಸಿ ನೃಪಂ II

[ಈ ಕಂದ ಪದ್ಯ ಸೌ.ಇ.ಇ. ೨೦, ೪೭. ೧೦೭೪ ಪು. ೫೪ ಶಾಸನದಲ್ಲೂ ಪುನರಾವೃತ್ತಿಯಾಗಿದೆ] ಎನ್ನಱ್ದ ಇಂದ್ರಕೇಶಿ ನರೇಂದ್ರನನ್ನು, ಜಯಕೇಶಿ ನೃಪನ ತಂದೆಯನ್ನು, 'ಅರ್ಹತ್ಪಾದಾಬ್ಜಾಳಿ' ಯೆಂದು ಪರಿಚಯಿಸಲಾಗಿದೆ. ಪುಲಿಗೆಱೆ ಪುರವರಾಧೀಶ್ವರನೆಂದು ಜಯಕೇಸಿಯರಸನನ್ನು ಇತರ ಶಾಸನಗಳು ಕರೆದಿವೆ [ಎ.ಇ. ೧೬. ಪು. ೩೩೨.] ಹುಲಗೂರು ಶಾಸನೋಕ್ತ ಮುಮ್ಮಡಿ ಜಯಕೇಸಿಯೂ ಜಿನಧರ್ಮ ಭೂಷಣನು ಮತ್ತು ಇದೇ ವಂಶದ ಒಂದೇ ಹೆಸರಿನ ವ್ಯಕ್ತಿಯಾಗಿದ್ದು ಪುರಿಗೆಱೆಗೆ ನಾಳ್ಗಾವುಂಡನಾಗಿದ್ದನು. ಈ ೩ನೇ ಜಯಕೇಶಿಯ ತನ್ನ ಅಜ್ಜ ೨ನೇ ಜಯಕೇಸಿ ರಾಷ್ಟ್ರಕೂಟನಿಗಿಂತ

ಐವತ್ತು ವರ್ಷಗಳಾದ ಮೇಲೆ ಬಂದವನು; ಮತ್ತು ಈ ಮುಮ್ಮಡಿ ಜಯಕೇಶಿಯ ವೇಳೆಗೆ ಅಧಿಕಾರದ ಶ್ರೇಣಿಯಲ್ಲಿ ಹಿಂಬಡ್ತಿಯನ್ನು ಕಾಣಬಹುದು.

ಹೀಗೆ ಎಂಟನೆಯ ಶತಮಾನದ ತಗ್ಗಲೂರು, ದೇವರಹಳ್ಳಿ, ಹೆಬ್ಬಾಳು ಶಾಸನಗಳ ಮಣಲೆರರಿಂದ, ಕ್ರಿ.ಶ. ೧೧೫೩ ರ ಶಾಸನಗಳ ಮುಮ್ಮಡಿ ಜಯಕೇಸಿಯ ವರೆಗೆ, ಸಗರ–ಮಣಲೆರ ಕುಲದ ಮಾಹಿತಿಗಳು ಚೆಲ್ಲವರಿದಿವೆ. ಎಲ್ಲವನ್ನೂ ಬಾಚಿತಬ್ಬಿದರೆ, ಕಾಲಾನುಕ್ರಮದಲ್ಲಿ ಪೋಣಿಸಿ ನೋಡಿದರೆ, ಒಟ್ಟು ಸುಮಾರು ಐನೂರು ವರ್ಷಗಳವರೆಗೆ ಈ ವಂಶದವರು ನಾನಾ ಅಧಿಕಾರ ಶ್ರೇಣಿಯಲ್ಲಿದ್ದುದು ಸ್ಪಷ್ಟವಾಗುತ್ತದೆ; ಅಲ್ಲದೆ ಸುಮಾರು ಹದಿನೈದು ಜನ ಪ್ರಮುಖರ, ಸಗರ ಕುಲಾನ್ವಯದವರ ಆಧಾರಗಳು ಖಚಿತವಾಗಿ ತಿಳಿದು ಬರುತ್ತವೆ. ಈ ಸಗರ ಮಣಲೆರ ಮನೆತನಕ್ಕೆ ಮಂಡ್ಯ ಜಿಲ್ಲೆಯ ಮಳವಳ್ಳಿ ಪರಿಸರವು ತಾಯ್ಮನೆಯಾಗಿ ಕಾಣುತ್ತದೆ: ಹತ್ತನೆಯ ಶತಮಾನದ ಉತ್ತರಾರ್ಧಾನಂತರದ ಕಾಲಘಟ್ಟದಲ್ಲಿ ಇವರ ಮುಖ್ಯ ನೆಲೆ ಕುಂತಳವಿಷಯದ ಬೆಳ್ವಲ ನಾಡಿನ ಪುಲಿಗೆರೆಯೆಂಬುದನ್ನು ಶಾಸನಗಳು ಸ್ಥಿರಪಡಿಸುತ್ತವೆ. ಒಂದು ಕಡ್ಡಿಯನ್ನು ಎರಡು ಸಮನಾದ ಭಾಗಗಳು ಬರುವಂತೆ ತುಂಡರಿಸಿದೆ ಹಾಗೆ, ಮಣಲೆರರು ಆಳಿದ ವರ್ಷಗಳಲ್ಲಿ ಅರ್ಧಭಾಗ ಹಳೆಯ ಮೈಸೂರಿನ ಭಾಗದಲ್ಲೂ ಇನ್ನರ್ಧವನ್ನು ಉತ್ತರ ಕರ್ನಾಟಕದಲ್ಲೂ ಬಾಳಿದುದು ಕಂಡುಬರುತ್ತದೆ.

ಆರಂಭದಲ್ಲಿ ನಾಳ್ಗಾವುಂಡರಾಗಿದ್ದ ಈ ಸಗರ ಮಣಲೆಯರ ಕುಲದವರು ಸಾಮಂತರಾಗಿ, ಮಹಾಸಾಮಂತರಾಗಿ, ರಾಷ್ಟ್ರಕರಾಗಿ, ಮಹಾಮಂಡಲೇಶ್ವರರಾಗಿ ಇನಿಸಿನಿಸು ಉದಿತೋದಿತರಾದುದನ್ನು ಸುಲಭವಾಗಿ ಗುರುತಿಸಬಹುದು. ಅದರಂತೆ ಇವರು ಕಟ್ಟಕಡೆಯ ಮುಮ್ಮಡಿ ಜಯಕೇಸಿಯೂ ಮತ್ತೆ ನಾಳ್ಗಾವುಂಡನಾಗಿ ವಿರಮಿಸಿದನೆಂಬುದು ಒಂದು ಯೋಗಾಯೋಗ ಸಾದೃಶ್ಯ. ಇವರು ಆರಂಭದಿಂದ ತೊಡಗಿ ಕಡೆಯತನಕ ಉದ್ದಕ್ಕೂ ಅಪ್ಪಟ ಜೈನರಾಗಿದ್ದರು; ಉಳಿದ ಅಜೈನ ಧರ್ಮಗಳನ್ನು ಗೌರವದಿಂದ ಕಾಣುತ್ತಿದ್ದರು. ಗಂಗರ ಆಶ್ರಯ ಮತ್ತು ಸಂಬಂಧವೂ ಮನಲೆರರಿಗೆ ಪ್ರಾರಂಭದ ಹಂತದಲ್ಲಿಯೇ ಇದ್ದುದರಿಂದ ಈ ಸಗರ–

ಮಣಲೆರಾನ್ವಯವು ಗಂಗರ ಕುಡಿಯೇ ಇರಬಹುದೆಂಬ ಭಾವನೆಗೆ ಇಂಬಾಗಿದೆ. ಆತಕೂರು ಶಾಸನೋಕ್ತ ಮಣಲೆರನೇ ಗಂಗರ ಮತ್ತು ರಾಷ್ಟ್ರಕೂಟರ ಜತೆಗೆ ಸ್ಥಾಪಿತವಾಗಿದ್ದಸ್ ನಂಟಿಗೆ ಕಡೆಯ ಕುಡಿ. ಅನಂತರ ಚಳುಕ್ಯರ ಮಡಿಲಿಗೆ ಬಿದ್ದ ಮಣಲೆರರಿಗೆ ಇಱಿವ ಬೆಡಂಗ ಮಾರಸಿಂಘನೇ ಮೊದಲನೆಯುವನು; ಈ ಹೆಸರಿನ ಹಿನ್ನೆಲೆಯನ್ನು ಕುರಿತು ಚರ್ಚಿಸಿದ್ದಾಗಿದೆಯಾದರೂ, ಈ ಹೆಸರಿನಲ್ಲಿ ಸಾಧಿಸಿರುವ ಕುಲ ಮತ್ತು ಕೃತಜ್ಞತೆಗಳ ಸಮನ್ವಯವನ್ನೂ ಅವಶ್ಯ ಪರಿಭಾವಿಸಬೇಕು. ಇಱಿವ ಬೆಡಂಗ ಎಂಬಲ್ಲಿ ಗಂಗರನ್ನೂ ನೆನೆದು ಎರಡೂ ಕಡೆಯ ನೆನಪುಗಳನ್ನು ಕೊಂಡಿ ಹಾಕಿ 'ಇಱಿವ ಬೆಡಂಗ ಮಾರಸಿಂಘ' ಎನ್ನಲಾಗಿದೆ. ಚರಿತ್ರಕಾರರು ಇದನ್ನು ಪರಿಭಾವಿಸಬೇಕು.

ಉಪಲಬ್ಧ ಶಾಸನಾಧಾರಗಳ ಪ್ರಕಾರ ಮುಮ್ಮಡಿ ಜಯಕೇಸಿಯು ಮಣಲೆರ ಕುಲದ ಕಡೆಯ ಪ್ರತಿಷ್ಠಿತ ವ್ಯಕ್ತಿ. ಅನಂತರ ಈ ಕುಲ, ಇತರ ಹಲವು ಕುಲಗಳಂತೆ ಚರಿತ್ರೆಯಲ್ಲಿ ವಿಲೀನವಾಯಿತು. ಈ ಹಂತದಲ್ಲಿ ಇನ್ನೆರಡು ಶಾಸನಗಳ ಮಾಹಿತಿಯತ್ತ ಚರಿತ್ರಕಾರರ ಗಮನ ಸೆಳೆಯ ಬಯಸುತ್ತೇನೆ:

೧. ಚಿತ್ರದುರ್ಗ ಜಿಲ್ಲೆಯ ದಾವಣಗೆರೆ ತಾಲೂಕಿನ ಬೇತೂರು ಶಾಸನೋಕ್ತರಾದ ಮುನ್ನೆಯಶೆಟ್ಟಿ ಗುತ್ತರಗೌಡ ಪಾಂಡ್ಯ ದೇಶದ ಪ್ರಭುಗಳನ್ನು ಮನ್ನೆಯರು ಕುಲದವರು ಎಂದು ಹೇಳಿದೆ [ಎ.ಕ. ೧೧, ಕ್ರಿ.ಶ. ೧೨೭೧. ದಾವಣಗೆರೆ. **Mysore Inscriptions**]. ಇದು ಮಣಲೆಯರು ಕುಲದ ಹೆಸರಿನ ರೂಪವಾಗಿರಬಹುದೆ ಎಂಬ ವಿಚಾರವಾಗಿ ಪ್ರಾಜ್ಞ ಚರಿತ್ರಕಾರರು ಪರಿಶೀಲಿಸಿ ಹೇಳಬೇಕು.

೨. ಸಂಗೂರು ಶಾಸನದಲ್ಲಿ 'ಸಾಗರದತ್ತಾನ್ವಯನ್ ಅಖಿಳಾಗಮ ಕೋವಿದನ್ ಆದ, ಮತ್ತು ಪುಲಿಕರ ನಗರದವನಾದ ಮುದ್ದಣ ಶ್ರೇಷ್ಠಿವರನ ಮಗನಾದ ಶಂಖದೇವನ ಹಾಗೂ ಶಂಖದೇವನ ಮಗನಾದ ಮಲ್ಲಪಥರಾಧೀಶನನ್ನು ಪರಿಚಯಿಸಿದೆ. ಬುಕ್ಕರಾಜನ ಮಗನಾದ ಇಮ್ಮಡಿ ವೀರ ಹರಿಹರನು ಚಕ್ರವರ್ತಿಯಾಗಿದ್ದಾಗ ಅವನ ಅಧೀನನಾಗಿ ಮಾಧವನು ಗೋವವನ್ನು ಆಳುತ್ತಿರುವಾಗ

ಈ ಮಲ್ಲಪನು ಸೇನಾಪತಿಯಾಗಿದ್ದನು.  ಮಲ್ಲಪನು ಚಂಗಪುರದ (ಸಂಗೂರು) ಪಾರ್ಶ್ವನಾಥ ಬಸದಿಯಲ್ಲಿ ಸಮಾಧಿಯಿಂದ ಮುಡಿಪಿದನು [ಸೌ.ಇ.ಇ. ೧೮, ೨೭೪. ೧೩೯೬. ಸಂಗೂರು (ಧಾರವಾಡ ಜಿಲ್ಲೆ, ಹಾವೇರಿ ತಾಲೂಕು) ಪು.೩೭೪–೭೮] ಇಲ್ಲಿ 'ಸಾಗರ ದತ್ತಾನ್ವಯ'ವೆಂಬುದು ಈ ಸಗರಕುಲಮಣಲೆಯರ ಮನೆತನದ ಬೆಸುಗೆಯ ಎಂಬುದನ್ನೂ ಇತಿಹಾಸಕಾರರು ತಿಳಿಸಬೇಕು.

೩. ನರಸಿಂಹರಾಜಪುರ ಶಾಸನದಲ್ಲಿ –'ಮಣಲಿ ಮನೆ ಒಡೆಯೋನ್ ಕೋಶಿಕ ವಂಶನ್' ಎಂಬ ವಾಕ್ಯವಿದೆ **[Inscriptions of the Western Gangas (1984), Dr. K.V. Ramesh; No.** ೭೧. ೮. ಶ. ಪು. ೨೫೪**].** ಇಲ್ಲಿ ಉಲ್ಲೇಖಿತವಾಗಿರುವ ಮಣಲಿ ಮನೆಗೂ ಮಣಲೆಯರಿಗೂ ಏನಾದರೂ ಸಂಬಂಧವಿದೆಯೇ ಎಂಬುದನ್ನು ಇತಿಹಾಸಕಾರರು ತಿಳಿಸಬೇಕು.